ಉಷಾ ಜೆ.

# ಅಂದಗೇಡಿ ದೋಣಿಯವ

ಬಹಳ ಹಿಂದೆ ಟ್ರಂಗ್ ಚೀ ಎಂಬ ಮೀನುಗಾರನಿದ್ದ. ಅವನು ಒಂಟಿ. ಪ್ರತಿನಿತ್ಯ ಸಂಜೆ ತನ್ನ ತೇಲುವ ದೋಣಿಯ ತುದಿಯಲ್ಲಿ ಕುಳಿತು, ಕೊಳಲು ನುಡಿಸುತ್ತ ನದಿಯಲ್ಲಿ ಸಾಗುತಿದ್ದ. ಹಳ್ಳಿಯ ಜನ ಅವನ ಕೊಳಲಿನ ನಾದಕ್ಕೆ ತಲೆದೂಗುತಿದ್ದರು. ಆದರೆ ಹೀಗೆ ಇಂಪಾಗಿ ಕೊಳಲು ನುಡಿಸುವವ ನೋಡಲು ಕುರೂಪಿಯಾಗಿದ್ದ. ಹಳ್ಳಿಯ ಚೆಲುವೆಯರೆಲ್ಲಾ ಅವನನ್ನು ನೋಡಿ ಮುಖ ತಿರುವುತಿದ್ದರು. ಆ ಊರಿನಲ್ಲಿ ಓರ್ವ ಸಿರಿವಂತ ಚೆಲುವೆ ಇದ್ದಳು. ಅವಳ ಶ್ರೀಮಂತ ತಂದೆ ತನ್ನ ಮುದ್ದಿನ ಮಗಳು ಕೈತಪ್ಪಬಾರದೆಂಬ ಭಯದಿಂದ ಮನೆಯ ಹೊರಗೆ ಕಾಲಿರಿಸದಂತೆ ಎಚ್ಚರವಹಿಸಿದ್ದ. ದಿನಾ ಸಂಜೆ ಅವಳು ಕಿಟಕಿಯ ಬಳಿ ಕುಳಿತು ಮೀನುಗಾರ ವೇಗವಾಗಿ ನದಿಯಲ್ಲಿ ಸಾಗುವುದನ್ನು ನೋಡುತ್ತ, ಅವನ ಕೊಳಲಿನಿಂದ ಹೊಮ್ಮುತ್ತಿದ್ದ ಇಂಪಾದ ನಾದವನ್ನು ಕೇಳುತ್ತ ಇದ್ದಳು. ತಾನು ದೋಣಿಯಲ್ಲಿ ಒರಗಿದಂತೆ, ಚೆಲುವ, ಸದೃಢ ತೋಳಿನ ಮೀನುಗಾರ ಕೊಳಲಿನ ಲಹರಿಯನ್ನು ಹರಿಸುತಿದ್ದಾಗ ಆತನ ಕಣ್ಣನ್ನೇ ದಿಟ್ಟಿಸುತ್ತಿರುವಂತೆ ಕಲ್ಪಿಸಿಕೊಳ್ಳುತ್ತಿದ್ದಳು. 'ಅವನ ಕೊಳಲಿನ ಮಧುರ ಗಾನವೇ ಹೇಳುತ್ತದೆ, ಅವನು ಚೆಲುವ ಮತ್ತು ದಯಾಮಯಿ, ಅವನ ಸ್ವರದಲ್ಲಿ ಏನೋ ಅಡಗಿದೆ. ನಾವು ಒಬ್ಬರಿಗೊಬ್ಬರು ಹುಟ್ಟಿದ್ದೇವೆ' ಎಂದುಕೊಳ್ಳುತ್ತಿದ್ದಳು.

ದಿನಗಳು ಉರುಳಿದವು. ಒಂದು ದಿನ ಆಕೆ ತನ್ನ ತಂದೆಯೆದುರು ಮಂಡಿಯೂರಿ ಹುಡುಗನನ್ನು ಒಮ್ಮೆ ಕರೆಸೆಂದು ಪ್ರಾರ್ಥಿಸಿದಳು. ತಂದೆ ಗೋಣಾಡಿಸಿ, 'ಅವನು ಕೀಳು ಜಾತಿಯವನು' ಎಂದ. ಅಲ್ಲದೆ, ಅವಳನ್ನು ಬೇರೆ ಕೊಠಡಿಗೆ ಕಳಿಸುವಂತೆ ಆಳುಗಳಿಗೆ ಹೇಳಿದ. ಇನ್ನೇನು ಕೊಳಲೂದುವವನನ್ನು ತನ್ನ ಮಗಳು ಮರೆಯುತ್ತಾಳೆ ಎಂದು ನೆಮ್ಮದಿಯಿಂದಿದ್ದ.

ಹುಡುಗಿ ತನ್ನ ಹೊಸ ಕೊಠಡಿಯಲ್ಲಿ ಬಿದ್ದುಕೊಂಡು ಅತ್ತಳು... ಕ್ಷೀಣಿಸುತ್ತಾ ಹೋದಳು... ತಂದೆ ತನ್ನ ಮಗಳ ಜೀವ ಉಳಿದರೆ ಸಾಕೆಂದು ಮೀನುಗಾರನನ್ನು ಕರೆಸಿ ತನ್ನ ಮಗಳ ಹಾಸಿಗೆಯ ಬಳಿ ಕುಳಿತು ಕೊಳಲೂದುವಂತೆ ಆಜ್ಞಾಪಿಸಿದ. ಮೀನುಗಾರನ ಕೊಳಲಗಾನವೇ ಆಕೆಯ ಜೀವ ಉಳಿಸುವ ಸಂಜೀವಿನಿಯಾದರೆ, ಬಹುಮಾನವಾಗಿ ಒಂದು ಚೀಲದ ತುಂಬಾ ಬಂಗಾರದ ನಾಣ್ಯಗಳನ್ನು ನೀಡಲಾಗುವುದು ಎಂದು ಆಶ್ವಾಸನೆ ಕೊಟ್ಟ. ಟ್ರಂಗ್ ಚೀ ಕೊಳಲನ್ನು ನುಡಿಸತೊಡಗಿದ. ಮಧುರವಾದ ಕೊಳಲುಗಾನ ಬಳಿಚಿಕೊಂಡು ಕ್ಷೀಣಿಸಿ ಇನ್ನೇನು ಸಾವಿನ ಹೊಸಿಲಲ್ಲಿ ನಿಂತ ಸುಂದರಿಯಲ್ಲಿ ಜೀವಕಳೆ ತುಂಬಿತು. ಚೆಲುವೆ ಮೆಲ್ಲನೆ ಕಣ್ಣುತೆರೆದು ತಾನು ಕನಸಿನಲ್ಲಿ ಸಂಧಿಸುತ್ತಿದ್ದ ಮೀನುಗಾರನನ್ನು ಕಂಡಳು...

ಆದರೆ ಅವನು ಕುರೂಪಿ! ಎಂಥಾ ಭಯಾನಕ. ಅವಳ ಕಲ್ಪನೆಯ ಮೀನುಗಾರನೇ ಬೇರೆ. 'ಇಲ್ಲಿಂದ ಕರೆದೊಯ್ಯಿರಿ ಇವನನ್ನು. ಇವನ ಮುಖ ನೋಡಲಾರೆ' ಎಂದು ಚೀರಿದಳು. ಹುಡುಗನನ್ನು ಕೊಠಡಿಯಿಂದ ಹೊರತಂದು ಬಿಟ್ಟರು. ಟ್ರಂಗ್ ಚೀ ಭವನದಿಂದ ಭಾರವಾದ ಹೆಜ್ಜೆಯನ್ನಿಡುತ್ತ ಹೊರನಡೆದ. ಚಿನ್ನದ ನಾಣ್ಯಗಳನ್ನು ಬೇಡವೆಂದ. ಅವನ ಹೃದಯ ಒಡೆದು ಚೂರಾಗಿತ್ತು. ದೋಣಿಯಲ್ಲಿ ಕೂತು ಹುಟ್ಟು ಹಾಕಿದ. ಕೊಳಲನ್ನು ಬೀಸಿ ನೀರಿಗೆ ಒಗೆದ. ಅವನು ಮತ್ತೆಲ್ಲೂ ಕಾಣಿಸಿಕೊಳ್ಳಲಿಲ್ಲ.